**ಓಎಸ್ ನಂಃ 43/2016**
**ಡಿಡಬ್ಲೂಃ 2**

**<u>ಸಾಕ್ಷಿಗೆ ದಿನಾಂಕ 27-11-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಮ್.ವಿ.ಎಲ್. ವಕೀಲರಿಂದ</u>

ನಮಗೆ ಸಂಬಂಧಪಟ್ಟ ಸರ್ವೆ ನಂಬರ್ 88 ಆಗಿರುತ್ತದೆ. ಸರ್ವೆ 88/3 ಮೊದಲು 8 ಎಕ್ರೆ 35 ಗುಂಟೆ ಆಗಿತ್ತು ಎಂದರೆ ಸರಿ. ಅದರಲ್ಲಿ 1 ಎಕ್ರೆ 30 ಗುಂಟೆ 'ಅ' ಖರಾಬ್ ಆಗಿದೆ ಎಂದರೆ ಸರಿ. 2015ರಲ್ಲಿ ನಿಮ್ಮ ತಂದೆ 1ನೇ ಪ್ರತಿವಾದಿ ಫಾರ್ಮ್ ನಂಬರ್ 10ನ್ನು ಕಟ್ಟಿದ ನಂತರ 1ನೇ ಪ್ರತಿವಾದಿಗೆ 2 ಎಕ್ರೆ 17 ಗುಂಟ ಅದರಲ್ಲಿ 23 ಗುಂಟೆ ಖರಾಬ್ ನೀಡಿ ಅದನ್ನು ಸರ್ವೆ ನಂಬರ್ 88/5 ಎಂದು ನಮೂದು ಮಾಡಿ ಸೂರ್ಜಾ ಇವರಿಗೆ ಸರ್ವೆ ನಂಬರ್ 88/6 ನಮೂದು ಮಾಡಿ ನೀಡಲಾಯಿತು ಎಂದರೆ ಸರಿ. ಸೂರ್ಜಾ ಅವರಿಗೆ ನೀಡಿದ ಜಾಗ 2 ಎಕ್ರೆ 35 ಗಂಟೆ ಆಗಿದ್ದು ಅದರಲ್ಲಿ 23 ಗುಂಟೆ ಖರಾಬ್ ಆಗಿ ಉಳಿದ 2 ಎಕ್ರೆ 12 ಗುಂಟೆ ಆತನಿಗೆ ನೀಡಲಾಗಿತ್ತು ಎಂದರೆ ಸರಿ. ಸರ್ವೆ ನಂಬರ್ 88/5 ಮತ್ತು 88/6 ರ ಪೂರ್ವ ಮತ್ತು ದಕ್ಷಿಣದ ಮೂಲೆಯಲ್ಲಿ ವಾದಿಗೆ ಸಂಬಂಧಪಟ್ಟ ಸರ್ವೆ ನಂಬರ್ 73 ಇದೆ ಎಂದರೆ ಸರಿ.

ಸಾಕ್ಷಿಗೆ ಈಗ ನಿಪಿ-3 ಮತ್ತು 4ರಲ್ಲಿ ಕಾಣುವ ಆಕಳಿನ ಕೊಟ್ಟಿಗೆ ಇದು ನಮಗೆ ಸೇರಿದ ಕೊಟ್ಟಿಗೆ ಆಗಿರುತ್ತದೆ. ಸದರಿ ನಿಪಿ-3 ಮತ್ತು 4ರ ಎಡಭಾಗದಲ್ಲಿ ಕಾಣುವ ಖುಲ್ಲಾ ಜಾಗೆಯು ವಾದಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ನಮಗೆ ಬಂದ ಹೊಲ ನಮ್ಮ ಹಿರಿಯರಿಂದ ಬಂದ ಹೊಲ ಆಗಿರುತ್ತದೆ. ವಾದಿಗೆ ಸರ್ವೆ ನಂಬರ್ 73 ಹೇಗೆ ಬಂತು ಎಂದರೆ ಸಾಕ್ಷಿಯು ಸರ್ವೆ ನಂಬರ್ 73ರಲ್ಲಿ ವಾದಿಗೆ ಸಂಬಂಧಪಟ್ಟ ಯಾವುದೇ ಜಾಗ ಇಲ್ಲ ಮತ್ತು ಅಲ್ಲಿ ಮನೆಗಳಾಗಿವೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 73ರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 73 – 10 ಎಕ್ರೆ 29 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ 2 ಎಕ್ರೆ 20 ಗುಂಟೆ ವಾದಿಗೆ ಸಂಬಂಧಿಸಿದ ಆಸ್ತಿ ಎಂದರೆ ಸಾಕ್ಷಿ ಸ್ಥಳದಲ್ಲಿ ಯಾವುದೇ ಆಸ್ತಿ ವಾದಿಗೆ ಸಂಬಂದಪಟ್ಟಸಿದ್ದು ಇಲ್ಲ ಆದರೆ ಪಹಣಿ ಪತ್ರಿಕೆಯಲ್ಲಿ ಆತನ ಹೆಸರಿದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 73 ಮತ್ತು ಸರ್ವೆ ನಂಬರ್ 88ರ ನಡುವೆ ಅನಾದಿ ಕಾಲದಿಂದ ಕಲ್ಲಿನ ಬಾಂದು ಇದೆ ಎಂದರೆ ಸರಿಯಲ್ಲ. ನಿಪಿ-3 ಮತ್ತು 4ರಲ್ಲಿ ಕಾಣುವ ಕಲ್ಲಿನ ಬಾಂದು ಸರ್ವೆ ನಂಬರ್ 73

ಮತ್ತು 88ರ ನಡುವಿನ ಬಾಂದು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಯಾರು ಕಟ್ಟಡ ಕಟ್ಟುತ್ತಿದ್ದಾರೆ ಎಂದು ಕೇಳಿದಾಗ ಸಾಕ್ಷಿ ತನ್ನ ಜಾಗದಲ್ಲಿ ತಾನೇ ಕಟ್ಟಡ ಕಟ್ಟುತ್ತಿದ್ದಾನೆ ಎಂದು ಒಪ್ಪಿದ ಕಾರಣ ಸದರಿ ಭಾವಚಿತ್ರವನ್ನು ನಿಡಿ-15 ಎಂದು ಗುರುತಿಸಲಾಯಿತು. ನಾನು ಸರ್ವೆ ನಂಬರ್ 88 ನ್ನು ಎನ್‌ಎ ಮಾಡಿಸಿಲ್ಲ. ನಿಡಿ-15ರಲ್ಲಿ ಕಾಣುವ ಕಟ್ಟಡವನ್ನು ಕಟ್ಟಲು ಪಂಚಾಯತಿಯಿಂದ ಪರವಾನಿಗೆ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಪಡೆದಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಪರವಾನಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಸರ್ವೆ ನಂಬರ್ 88 ರಲ್ಲಿ ಕಟ್ಟಡ ಕಟ್ಟಿದ ಕಾರಣ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣ ಚಾಲ್ತಿಯಲ್ಲಿದ್ದಾಗ ಕಟ್ಟಡ ಕಟ್ಟಿದ್ದೀರಿ ಎಂದರೆ ಸರಿ. ಸರ್ವೆ ನಂಬರ್ 73ರಲ್ಲಿ 2 ಎಕ್ರೆ 20 ಗುಂಟೆ ವಾದಿಗೆ ಸೇರಿದ್ದು ಇಂದಿಗೂ ಅವರು ಬೇಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 73ರಲ್ಲಿ ಸಾಕಷ್ಟು ಮನೆಗಳನ್ನು ಬೇರೆಯವರು ಕಟ್ಟಿದ್ದನ್ನು ನೋಡಿ ನೀವು ಸರ್ವೆ ನಂಬರ್ 73 ಮತ್ತು 88 ರ ನಡುವಿನ ಕಲ್ಲಿನ ಬಾಂದನ್ನು ಒಡೆದು ಕಟ್ಟಡ ಕಟ್ಟಿದ್ದೀರಿ ಎಂದರೆ ಸರಿಯಲ್ಲ. 2016ರಲ್ಲಿ ದಾವಾ ಆಸ್ತಿ ಮತ್ತು ನನ್ನ ಆಸ್ತಿಯ ನಡುವೆ ಇರುವ ಬಾಂದು ಸರಿಯಿಲ್ಲ ಎಂದು ಅದನ್ನು ಕೆಡವಿದ್ದೀರಿ ಎಂದರೆ ಸರಿಯಲ್ಲ. ಆದ ಕಾರಣ ವಾದಿ ಈ ದಾವೆಯನ್ನು ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ನಿಮಗೆ ಸರ್ವೆ ನಂಬರ್ 73ಕ್ಕೆ ಸಂಬಂಧ ಇಲ್ಲ ಎಂದರೆ ಸರಿ. ನಿಮ್ಮ ಪ್ರಮಾಣಪತ್ರದಲ್ಲಿ ನಮೂದಿಸಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ನಿಮ್ಮ ಆಸ್ತಿಯ ನಡುವೆ ಬಾಂದು ಇದ್ದು ಅದನ್ನು ನೀವು ಕೆಡವಲು ಪ್ರಯತ್ನಿಸಿದ ಕಾರಣ ಈ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

**ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.**